ಶ್ರೀ ವಿರೇಂದ್ರ ಪಾಟೀಲ್.—ಮಾನ್ಯ ಸದಸ್ಯರಾದ ಪ್ರೊ. ನಂಜುಂಡಸ್ವಾಮಿಯವರು ಹೇಳಿದರು ಕೆಲವು ಕಡೆ ಒತ್ತಾಯದಿಂದ ವಸೂಲು ಮಾಡುತ್ತಿದ್ದಾರೆ, ಮತ್ತೇ ಹಂಡೆ ಲೋಟ ಹರಾಜು ಮಾಡುತ್ತಿದ್ದಾರೆ ಎಂದು ಹೇಳಿದರು ಈಗ ಒತ್ತಾಯ ಮಾಡಿ ಸಾಲ ವಸೂಲು ಮಾಡಬಾರದು ಆ ರೀತಿ ಮಾಡುವುದು ಸರಿಯಲ್ಲ. ಆದರೆ ಒಂದು ವಿಚಾರ ೧೦ ಸಾವಿರ ರೂಪಾಯಿಗಳ ಕೆಳಗಿನ ಸಾಲದ ಬಗ್ಗೆ ನಾವೆಲ್ಲ ಇಲ್ಲಿ ಚರ್ಚೆ ಮಾಡುತ್ತಿರುವುದು ಅವರ ಸಾಲವನ್ನು ಯಾವ ರೀತಿಯಾದರೂ ಮನ್ನಾ ಮಾಡಬೇಕೆಂದು. ೧೦ ಸಾವಿರ ರೂಪಾಯಿಗಳ ಕೆಳಗಿನ ಸಾಲ ಇರುವಂತಹ ರೈತರ ಮೇಲೆ ಈ ತರಹ ದೌರ್ಜನ್ಯವೇನಾದರೂ ನಡೆಡಿದ್ದರೆ ಆ ಬಗ್ಗೆ ತಾವು ನನಗೆ ವಿವರಗಳನ್ನು ಕೊಟ್ಟರೆ ತಕ್ಷಣ ಅದರ ಬಗ್ಗೆ ವಿಚಾರಿಸಿ ತಪ್ಪು ಮಾಡಿದ್ದರೆ ತಪ್ಪನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ೧೦ ಸಾವಿರ ರೂಪಾಯಿಗಳಿಗೂ ಮೇಲ್ಪಟ್ಟಂತಹ ಶ್ರೀಮಂತ ರೈತರು ಯಾರು ಇರುತ್ತಾರೋ ಅಂತಹವರ ಸಾಲ ವಸೂಲಿ ಮಾಡುವಂತಹ ಪ್ರಶ್ನೆ ಬಂದಾಗ ಶ್ರೀಮಂತರ ಸಾಲದ ಬಗ್ಗೆ ನಮಗೆ ಬಡವರ ಸಾಲದ ಬಗ್ಗೆ ಎಷ್ಟು ಅನುಕಂಪ ಇಟ್ಟಿದ್ದೇವೆಯೋ ಅಷ್ಟೇ ಅನುಕಂಪ ಶ್ರೀಮಂತ ರೈತರ ಸಾಲದ ಮೇಲೆ ಇರತಕ್ಕಂಥಾದ್ದು ಅಲ್ಲವೆನ್ನುವ ವಿಚಾರವನ್ನು ನಾನು ಹೇಳುತ್ತೇನೆ.

ಪ್ರೊ ಎಂ. ಡಿ. ನಂಜುಂಡಸ್ವಾಮಿ.—ಶ್ರೀಮಂತ ರೈತರ ಮನೆಗಳಲ್ಲಿ ಹಂಡೆ ಲೋಟ ಜಪ್ತಿ ಮಾಡಬೇಡಿ.

ಶ್ರೀ ವೀರೇಂದ್ರ ಪಾಟೀಲ್.—ಬಡವರ ಮನೆಯಲ್ಲಿ ಹಾಗೂ ೧೦ ಸಾವಿರ ಒಳಪಟ್ಟಿರುವ ಸಾಲಗಾರರ ಮನೆಯಲ್ಲಿ ಜಪ್ತಿ ಮಾಡಿರುವ ವಿವರಗಳನ್ನು ಕೊಟ್ಟರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ಕೂಲಿ ಗ್ರಾಮದಲ್ಲಿ ನೀರಾವರಿ ಟ್ಯಾಕ್ಸ್ ಕಟ್ಟದೇ ಇದ್ದ ಸಲುವಾಗಿ ರೈತರುಗಳ ಮನೆಗಳನ್ನು ಜಪ್ತಿ ಮಾಡುತ್ತಿದ್ದಾರೆ. ಮಾನ್ಯ ಮಲ್ಲನಗೌಡ ಪಾಟೀಲರು ನಮ್ಮ ಜಿಲ್ಲೆಗೆ ಬಂದಿದ್ದಾಗ ಇದರ ಬಗ್ಗೆ ನಾವು ತಿಳಿಸಿದ್ದೆವು. ಮೂರು ಎಕರೆ, ನಾಲ್ಕು ಎಕರೆ ಜಮೀನು ಇರುವ ಬಡವರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ?

ಶ್ರೀ ವೀರೇಂದ್ರ ಪಾಟೀಲ್.—ನನ್ನ ಗಮನಕ್ಕೆ ಬಂದರೆ ತಾನೇ ಕ್ರಮ ತೆಗೆದುಕೊಳ್ಳುವುದು?

ಗಮನ ಸೆಳೆಯುವ ಸೂಚನೆಗಳು

ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಅಭಾವದಿಂದ ರೈತರುಗಳು ಪಂಪುಸೆಟ್ಟುಗಳಿಗೆ ಆಗಿರುವ ತೊಂದರೆ

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ನೀರಾವರಿ ಮತ್ತು ಇಂಧನ ಮಂತ್ರಿಗಳು)—

ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿಯ ಅಭಾವದಿಂದ ರೈತರ ನೀರೆತ್ತುವ ಪಂಪುಸೆಟ್ಟುಗಳಿಗೆ ಕನಿಷ್ಟ ವಿದ್ಯುಚ್ಛಕ್ತಿ ಸರಬರಾಜಿಲ್ಲದೆ, ವ್ಯವಸಾಯದ ಕೆಲಸಗಳು ಕುಂಟಿತವಾಗಿರುತ್ತೆ ಮತ್ತು ಮುಂದಿನ ಬೇಸಿಗೆಯಲ್ಲಿ ಪರಿಸ್ಥಿತಿ ಮತ್ತಷ್ಟು ಉಲ್ಬಣವಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಸರ್ಕಾರದವರು ಮೇಲ್ಕಂಡ ಪರಿಸ್ಥಿತಿಯನ್ನು ಸುಧಾರಿಸಲು ಹಾಕಿಕೊಂಡಿರುವ ಯೋಜನೆಗಳ ಬಗ್ಗೆ

ಕೋಲಾರ ಜಿಲ್ಲೆಯಲ್ಲಿ ದಿನಾಂಕ ೩೧-೩-೧೯೮೯ರವರೆಗೆ ೭೮,೯೧೭ ನೀರಾವರಿ ಪಂಪುಸೆಟ್ಟುಗಳನ್ನು ಸರ್ವಿಸ್ ಮಾಡಲಾಗಿತ್ತು. ಈ ಸಾಲಿನಲ್ಲಿ (೧೯೮೯-೯೦) ಕೋಲಾರ ಜಿಲ್ಲೆಗೆ ೩,೬೦೦ ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸುವ ಗುರಿ ಹೊಂದಿದ್ದು ಫೆಬ್ರುವರಿ ೧೯೯೦ರ ಅಂತ್ಯದವರೆಗೆ ೩೦೨೦ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ. ಈಗ ಹಾಕಿಕೊಂಡಿರುವ ಗುರಿಯಲ್ಲಿ ಉಳಿದಿರುವ ಬಾಕಿಯನ್ನು ಈ ವರ್ಷದ ಅಂತ್ಯದೊಳಗೆ ಮುಗಿಸಲಾಗುವುದು.

ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಸರಬರಾಜಿನ ಗುಣ ಮಟ್ಟವನ್ನು ಸುಧಾರಿಸಲು ಈ ಕೆಳಕಂಡ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.

೧) ಕೋಲಾರದಲ್ಲಿ ೧೪೦೦ ಎಂ. ವಿ. ಎ, ೨೨೦/೬೬ ಕೆ. ವಿ. ಸ್ಟೇಷನ್ ಅನ್ನು ದಿನಾಂಕ ೨೯-೮-೧೯೮೯ರಂದು ಕಮೀಷನ್ ಮಾಡಲಾಗಿದೆ,

೨) ಮಾಸ್ತಿಯಲ್ಲಿ ೧×೬.೩ ಎಂ. ವಿ. ಎ. ೬೬/೧೧ ಕೆ. ವಿ. ಸ್ಟೇಷನ್ ಅನ್ನು ದಿನಾಂಕ ೨-೮-೧೯೮೯ ರಂದು ಕಮೀಷನ್ ಮಾಡಲಾಗಿದೆ.

೩) ಅಲ್ಲದೆ, ಶ್ರೀನಿವಾಸಪುರ, ಬಂಗಾರಪೇಟೆ ಮತ್ತು ಮುಳಬಾಗಿಲುಗಳಲ್ಲಿ ತಲಾ ಒಂದು ೬೬/೧೧ ಕೆ ವಿ. ಸ್ಟೇಷನ್ ಅನ್ನು ನಿರ್ಮಾಣ ಮಾಡಲಾಗುತ್ತಿದೆ. ಹಾಗೂ ತಲಗವಾರದಲ್ಲಿ ಒಂದು ೩೩/೧೧ ಕೆ.ವಿ. ಸ್ಟೇಷನ್ ಅನ್ನು ನಿರ್ಮಾಣ ಮಾಡುವ ಕಾರ್ಯಕ್ರಮ ಇದೆ. ಈ ಕಾರ್ಯಕ್ರಮವನ್ನು ೧೯೯೧-೯೧ನೇ ಸಾಲಿನ ಅಂತ್ಯದೊಳಗೆ ಮುಗಿಸಲು ಯೋಜಿಸಿದೆ.

೪) ಗೌರಿಬಿದನೂರಿನಲ್ಲಿರುವ ೨೨೦ ಕೆ.ವಿ. ಸ್ಟೇಷನ್ನಿನಲ್ಲಿ ೧×೩೦ ಎಂ ವಿ ಎ.ಆರ್.ಸಾಮರ್ಥ್ಯದ ಕೆಪಾಸಿಟರ್ ಬ್ಯಾಂಕನ್ನು ಸ್ಥಾಪಿಸಲಾಗುತ್ತಿದ್ದು ಈ ಕಾರ್ಯವನ್ನು ಶೀಘ್ರ ಗತಿಯಲ್ಲಿ ಮುಗಿಸಲಾಗುವುದು.

ಮೇಲ್ಕಂಡ ಯೋಜನೆ ಕ್ರಮಗಳಿಂದ ಕೋಲಾರ ಜಿಲ್ಲೆಯಲ್ಲಿ ವಿದ್ಯುತ್ ಪ್ರಸಾರಣ ಮತ್ತು ಸರಬರಾಜಿನ ಗುಣಮಟ್ಟವು ಬಹಳಷ್ಟು ಸುಧಾರಿಸುವುದು.

ಶ್ರೀ ಎಂ. ವಿ. ವೆಂಕಟಪ್ಪ.—ಕೋಲಾರ ಟೌನ್‌ನಲ್ಲಿ ಸುಮಾರು ಮೂರು ಕೋಟಿ ರೂಪಾಯಿ ವೆಚ್ಚದಲ್ಲಿ ಒಂದು ಡೀಸೆಲ್ ಜನರೇಟರನ್ನು ಪ್ರಾರಂಭ ಮಾಡಬೇಕೆಂದು ಹಿಂದಿನ ಸರ್ಕಾರ ಮಾಡಿತ್ತು. ಅದರ ಬಗ್ಗೆ ತಪ್ಪುಗೂ ಗೊತ್ತಿದೆ. ಅದನ್ನು ಪೂರ್ಣಗೊಳಿಸಲು ಏನಾದರೂ ಮಾಡುತ್ತೀರಾ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈ ಬಗ್ಗೆ ಜನರೇಟರನ್ನು ಸ್ಥಾಪನೆ ಮಾಡಬೇಕೆಂದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಶೀಘ್ರದಲ್ಲಿ ಇದನ್ನು ಅನುಷ್ಠಾನಕ್ಕೆ ತರುವುದಕ್ಕೆ ಎಲ್ಲಾ ಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ತಿಳಿಸುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಮಂತ್ರಿಯವರ ಜಿಲ್ಲೆಯಲ್ಲಿರುವಂತೆ ನಮ್ಮ ಜಿಲ್ಲೆಯಲ್ಲಿ ಹೇಮಾವತಿ ನದಿ ಇಲ್ಲ, ಕೃಷ್ಣಾ ನದಿಯೂ ಇಲ್ಲ, ಕಾವೇರಿ ನದಿಯೂ ಇಲ್ಲ. ಬರೀ ಬಾವಿ ನೀರನ್ನು ಜೋರ್‌ವೆಲ್‌ಗಳ ಮೂಲಕ ನೀರನ್ನು ಹೊರ ತೆಗೆದು ಉಪಯೋಗಿಸಬೇಕಾಗುತ್ತದೆ. ಕರೆಂಟ್ ಇಲ್ಲದೇ ಹೋದರೆ ನೀರನ್ನು ಹೊರ ತೆಗೆಯುವುದಕ್ಕಾಗುವುದಿಲ್ಲ. ಕರೆಂಟ್ ಕೊಟ್ಟ ಹಾಗೆ ಕೊಡುತ್ತಾರೆ. ಆದರೆ ವೋಲ್ಟೇಜ್ ಕಡಿಮೆ ಇರುತ್ತದೆ. ವೋಲ್ಟೇಜ್ ಕಡಿಮೆ ಕೊಟ್ಟರೆ ಪಂಪುಸೆಟ್ಟುಗಳು ಸುಡುವುದು ಸರ್ವೆ ಸಾಮಾನ್ಯವಾಗಿದೆ. ಈಗಾಗಲೇ ಇದರ ಬಗ್ಗೆ ರೈತರುಗಳು ಕೆ.ಇ.ಬಿ. ಮುಂದೆ ಧರಣಿ ಮತ್ತು ಸತ್ಯಾಗ್ರಹ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಕೆ.ಇ.ಬಿ., ಆಫೀಸ್‌ಗೆ ಬಿಗ ಹಾಕುವಷ್ಟು ಮಟ್ಟಿಗೆ ರೈತರುಗಳು ಬಂದಿದ್ದಾರೆ, ಈ ಪರಿಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಪ್ರಯತ್ನ ಪಡುತ್ತೀರಾ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಸ್ವಾಮಿ, ಇದು ಯಾವುದೇ ಪಕ್ಷದ ಸಮಸ್ಯೆಯಲ್ಲ. ಇದು ರೈತರ ಪ್ರಶ್ನೆ. ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿಯ ಕೊರತೆ ಬಹಳ ತೀವ್ರವಾಗಿದೆಯೆಂದು ಈಗಾಗಲೇ ಸರ್ಕಾರದ ಗಮನದಲ್ಲಿ ಇದೆ. ಇದನ್ನು ಶಾಶ್ವತವಾಗಿ ನಿವಾರಣೆ ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನು ಹಾಕಿಕೊಳ್ಳುವ ದಿಸೆಯಲ್ಲಿ ಈ ಸರ್ಕಾರ ಇದೆಯೆಂದು ಆಶ್ವಾಸನೆ ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ ನಾನು ಕೆಲವು ವಿಷಯಗಳನ್ನು ಹೇಳುವುದಕ್ಕೆ ತಾವು ಪರವಾನಿಗೆಯನ್ನು ಕೊಡಬೇಕು. ಈಗ ಮಂತ್ರಿಯವರು ಕೊಟ್ಟರತಕ್ಕ ಹೇಳಿಕೆಗೂ ಮತ್ತು ಅಲ್ಲಿರತಕ್ಕ ವಸ್ತು ಸ್ಥಿತಿಗೂ ಅಜಗಜಾಂತರ ವ್ಯತ್ಯಾಸ ಇದೆ.

ಅಧ್ಯಕ್ಷರು.—ಮಾನ್ಯ ಬೈರೇಗೌಡರೇ ಈಗಾಗಲೇ ನಾನು ತೀರ್ಮಾನ ಕೊಟ್ಟಿದ್ದೇನೆ. ಯಾರು ಸಹಿ ಹಾಕಿದ್ದಾರೋ, ಯಾರ ಹೆಸರು ನಮೂದಿತವಾಗಿರುತ್ತದೋ ಅಂತಹವರಿಂಗಳಿಗೆ ಮಾತ್ರ ಕರೆಯುವುದು ಗಮನ ಸೆಳೆಯುವ ಸೂಚನೆಯ ನಿಲುವು.

ಗಮನ ಸೆಳೆಯುವ ಸೂಚನೆಗಳ ಬಗ್ಗೆ ನಾವು ಈಗಾಗಲೇ ಒಂದು ನಿಯಮವನ್ನು ಹಾಕಿಕೊಂಡಿದ್ದೇವೆ. ಆದರ ಪ್ರಕಾರವೇ ನಾವುಗಳು ಕಾರ್ಯಕಲಾಪಗಳನ್ನು ನಡೆಸಬೇಕಾಗುತ್ತದೆ. ಗಮನ ಸೆಳೆಯುವ ಸೂಚನೆಗೆ ಯಾರು ಯಾರು ಸಹಿ ಮಾಡಿರುತ್ತಾರೆ, ಅದರಲ್ಲಿ ಯಾರು ಯಾರ ಹೆಸರು ನಮೂದಿತವಾಗಿರುತ್ತದೆ, ಆ ಮಾನ್ಯ ಸದಸ್ಯರುಗಳವರು ಮಾತ್ರ ವಿಷಯವನ್ನು ಮಾತನಾಡಬೇಕು. ಇನ್ನು ಮುಂದೆ ಟಚಿಟ್ ಡಿಬೇಟ್ ಇದೆ. ಅದರಲ್ಲಿ ಮಾನ್ಯ ಸದಸ್ಯರು ಮಾತನಾಡಬಹುದು.

ಶ್ರೀ ಸಿ. ಬೈರೇಗೌಡ.—ಸನ್ಮಾನ್ಯ ಅಧ್ಯಕ್ಷರು, ದಯಮಾಡಿ ನನಗೆ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕೋಲಾರದಲ್ಲಿ ವಿದ್ಯುಚ್ಛಕ್ತಿಯ ಸುಧಾರಣೆಗಳು ಏನೂ ಆಗಿಲ್ಲ.

ಆ ಬಗ್ಗೆ ಹಿಂದಿನ ಸರಕಾರದವರು ಇದ್ದಾಗ ಒಂದು ಸದನದ ಸಮಿತಿಯನ್ನು ಮಾಡಿ ಅಲ್ಲಿರತಕ್ಕಂಥ ಪಾಸ್ತುವಾಂಶಗಳನ್ನು ಸರಕಾರದ ಗಮನಕ್ಕೆ ತರುವಂತೆ ವ್ಯವಸ್ಥೆ ಮಾಡಿತ್ತು. ಆ ಸಮಿತಿಯು ಕೊಡ ತಕ್ಕಂಥ ಸಲಹೆಗಳನ್ನು ಸರಕಾರದವರು ಗಮನಿಸಿ ಕ್ರಮ ತೆಗೆದುಕೊಳ್ಳಲು ಒಂದು ವ್ಯವಸ್ಥೆ ಆಗಿತ್ತು. ಅಂಥ ಒಂದು ಸಮಿತಿಯನ್ನು ತಪ್ಪು ಸರಕಾರದವರು ರಚನೆ ಮಾಡುವುದಕ್ಕೆ ತಯಾರಾಗಿದ್ದೀರಾ ಎಂದು ತಪ್ಪು ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು.—ಮುಂದಿನ ಗಮನ ಸೆಳೆಯುವ ಸೂಚನೆ ಮಾನ್ಯ ಶ್ರೀ ಸಿಂಧ್ಯ ಅವರದ್ದು

ಶ್ರೀ ಸಿ. ಬೈರೇಗೌಡ.—ಮಾನ್ಯ ಸಚಿವರು ಉತ್ತರ ಕೊಡುತ್ತಾರೆ...

ಶ್ರೀ ಜಿ.ಪುಟ್ಟಸ್ವಾಮಿಗೌಡ.—ಇಲ್ಲ, ಉತ್ತರ ಇಲ್ಲ.

ರಾಜ್ಯ ಸರ್ಕಾರದ ಎ ಹಾಗೂ ಬಿ ಗುಂಪಿನ ಅಧಿಕಾರಿಗಳ ಮುಷ್ಕರದ ದಿನಗಳ ಗೈರುಹಾಜರಿಯನ್ನು ಸಾಂದರ್ಭಿಕ ರಜೆಯೆಂದು ಪರಿಗಣಿಸುವುದು ಮತ್ತು ಸಂಬಳದ ಬಿಡುಗಡೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸನ್ಮಾನ್ಯ ಸಭಾಧ್ಯಕ್ಷರೆ, ರಾಜ್ಯ ಸರಕಾರದ 'ಎ' ಹಾಗೂ 'ಬಿ' ಗುಂಪಿನ ಅಧಿಕಾರಿಗಳ ಮುಷ್ಕರ ದಿನಗಳ ಗೈರು ಹಾಜರಿಯನ್ನು ಸಾಂದರ್ಭಿಕ ರಜೆಯೆಂದು ಪರಿಗಣಿಸುವುದು ಹಾಗೂ ತಡೆ ಹಿಡಿಯಲಾದ ಅವರ ಸಂಬಳವನ್ನು ಬಿಡುಗಡೆ ಮಾಡುವ ಬಗ್ಗೆ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

೧. ವಿಧಾನಸಭಾ ಸದಸ್ಯರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ನೀಡಿರುವ ಗಮನ ಸೆಳೆಯುವ ಸೂಚನೆಯನ್ನು ಕೆಳಗೆ ಉಲ್ಲೇಖಿಸಲಾಗಿದೆ.

"ಬಗ್ಗೆ : ರಾಜ್ಯ ಸರ್ಕಾರದ I ಮತ್ತು IIನೇ ದರ್ಜೆ ಅಧಿಕಾರಿಗಳ ಗೈರು ಹಾಜರಿಯನ್ನು ಸಾಂದರ್ಭಿಕ ರಜೆಯೆಂದು ಪರಿಗಣಿಸುವುದು ಮತ್ತು ತಡೆಹಿಡಿದ ಅವರ ಸಂಬಳವನ್ನು ಬಿಡುಗಡೆ ಮಾಡುವುದು."

೨. ಮೇಲೆ ಉಲ್ಲೇಖಿಸಿದ ಗಮನ ಸೆಳೆಯುವ ಸೂಚನೆಯಲ್ಲಿ ಮುಷ್ಕರದ ಬಗ್ಗೆ ಉಲ್ಲೇಖವಿಲ್ಲದಿದ್ದರೂ ಅಲ್ಲಿ ಉಲ್ಲೇಖಿಸಲಾದ ಗೈರು ಹಾಜರಿಯು ದಿನಾಂಕ ೧೫-೨-೧೯೯೦ ರಿಂದ ೧೯-೨-೧೯೯೦ ರವರೆಗಿನ ಮುಷ್ಕರದ ಅವಧಿಯಲ್ಲಿನ ಗೈರು ಹಾಜರಿಗೆ ಸಂಬಂಧಿಸಿದ್ದೆಂದು ಭಾವಿಸಲಾಗಿದೆ.

೩. ನಾವು ಸರ್ಕಾರದಲ್ಲಿ ಅಧಿಕಾರ ವರ್ಗ (heirarchical) ಸಂಸ್ಥೆಯನ್ನು ಹೊಂದಿದ್ದು ಇಲ್ಲಿ ಜವಾಬ್ದಾರಿಯು ಮಟ್ಟವು ಅಧಿಕಾರ ವರ್ಗದ (heirachical) ಮಟ್ಟಕ್ಕೆ ಪ್ರಮಾಣ ಬದ್ಧವಾಗಿದೆ. ಅಧಿಕಾರ ವರ್ಗ (heirarchy)ದಲ್ಲಿ ಎ ಮತ್ತು ಬಿ ಗುಂಪಿನ ಅಧಿಕಾರಿಗಳು ಉನ್ನತ ಹುದ್ದೆಗಳನ್ನು ಆಕ್ರಮಿಸಿಕೊಂಡಿದ್ದು, ಅಧಿಕಾರ ವರ್ಗದ ಕೆಳಹಂತಗಳಲ್ಲಿರುವ ಸಿ ಮತ್ತು ಡಿ ಗುಂಪಿನ ನೌಕರರ ಅಧಿಕಾರ ವರ್ಗ (heirarchy) ಕ್ಕಿಂತ ಹೆಚ್ಚಿನ ಜವಾಬ್ದಾರಿ ಹೊಂದಿದ್ದಾರೆ. ಆದರೆ ಸರ್ಕಾರವು ಮಾತುಕತೆಯಲ್ಲಿ ಭಾಗವಹಿಸಿದಂತೆ ಕರೆ ಕೊಟ್ಟಿದ್ದರೂ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಪ್ರಾರಂಭಿಸಿದ ಮುಷ್ಕರದಲ್ಲಿ ಪಾಲ್ಗೊಂಡು ಅನೇಕ ಎ ಮತ್ತು ಬಿ ಗುಂಪಿನ ಅಧಿಕಾರಿಗಳು ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಗಳಿಗೆ ಸಲ್ಲದ ರೀತಿಯಲ್ಲಿ ನಡೆದುಕೊಂಡಿದ್ದಾರೆ.

೪. ಆರೋಗ್ಯಕರ ಆಡಳಿತದ ಕಾರ್ಯವು ಅದರ ಸಿಬ್ಬಂದಿಯ ದಕ್ಷತೆಯ ಮೇಲೆ ಮಾತ್ರವಲ್ಲದೆ ಆ ಸರ್ಕಾರಿ ನೌಕರರ ಉನ್ನತ ಮಟ್ಟದ ವೈಯುಕ್ತಿಕ ಚಾರಿತ್ರ್ಯ ಮತ್ತು ಶಿಸ್ತನ್ನು ಪಾಲಿಸುವುದರ ಮೇಲೆ ಅವಲಂಬಿಸಿರುತ್ತದೆಂಬ ಅಂಶವನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಲಾಗಿದೆ. ಒಬ್ಬ ಸರ್ಕಾರಿ ನೌಕರ ಅದರಲ್ಲೂ ಮುಖ್ಯವಾಗಿ ಒಬ್ಬ ಅಧಿಕಾರಿ ಆಡಳಿತ ಯಂತ್ರದಲ್ಲಿನ ಒಂದು ಭಾಗದಿಂದಾಗಿ ಅವನು ಸಮಾಜದಲ್ಲಿ ವಿಶೇಷ ಸ್ಥಾನವನ್ನು ಪೊಂದಿದ್ದು ಸಮಾಜದ ಒಳಿತು ಮತ್ತು ಉಳಿವುಗಳು, ಅವನ ಅಜೆತನೆಯಿಲ್ಲದ ಮತ್ತು ದಕ್ಷತೆಯ ಕಾರ್ಯನಿರ್ವಹಿಸುವಿಕೆ ಮೇಲೆ ಅವಲಂಬಿತವಾಗಿರುತ್ತದೆ. ಅವನು ಯಾವುದೇ ಪರಿಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿರಲಿ, ಅವನ ಕೆಲಸ ಮತ್ತು ನಡತೆ ಜನಗಳ ಮೇಲೆ ನೇರವಾದ ಪರಿಣಾಮ ಬೀರುತ್ತವೆ. ಇದು ಅಧಿಕಾರ ಚಲಾಯಿಸುವ ಮತ್ತು ಸದ್ವರ್ತನೆಯಿಂದ